ಸಭೆಯ ಮುಂದಿಡಲಾಗುವ ಕಾಗದಪತ್ರಗಳು

ಶ್ರೀ ಎಂ.ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ ಹಣಕಾಸು ಮಂತ್ರಿಗಳ ಪರವಾಗಿ ಭಾರತದ ನಿಯಂತ್ರಕರು ಹಾಗೂ ಮಹಾಲೆಕ್ಕ ಪರೀಕ್ಷಕರು (ಕಂದಾಯ ಸ್ವೀಕಾರ) ಅವರು ನೀಡಿರುವ ಕರ್ನಾಟಕ ಸರ್ಕಾರದ 94-95ನೇ ಸಾಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯ ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ವಿಷಯ

ಕೃಷ್ಣಾ ಬೇಸಿನ್ ಪ್ರಾಜೆಕ್ಟ್ ಕುರಿತು

ಅಧ್ಯಕ್ಷರು : ಮಲ್ಲಿಕಾರ್ಜುನ ಖರ್ಗೆಯವರೆ, ಈಗ ನಮ್ಮನೋಟೀಸ್ ಕೂಡ ಸಿಕ್ಕಿದೆ, ಹಾಗೆ ನಮ್ಮ ಭಾರತೀಯ ಜನತಾ ಪಕ್ಷದ ಸ್ನೇಹಿತರುಗಳೂ ಕೂಡ ಅದೇ ವಿಚಾರದಲ್ಲೇ ಒಂದು ನೋಟೀಸನ್ನು ಮೊದಲೇ ಎಚ್.ಎನ್. ನಂಜೇಗೌಡರು ಕಳುಹಿಸಿದ್ದಾರೆ. ಅವರು ನಿಯಮ 69ರ ಅಡಿಯಲ್ಲಿ ಕಳುಹಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಂಜೇಗೌಡರು ಏನು ನೋಟೀಸನ್ನು ಕೊಟ್ಟಿದ್ದಾರೆ ಆದರೆ ಅವರು ಈ ಅಧಿವೇಶನಕ್ಕೆ ಬರುವುದಿಲ್ಲ ಎಂದು ನನಗೆ ಗೊತ್ತಾಗಿದೆ.

ಅಧ್ಯಕ್ಷರು : ನಂಜೇಗೌಡರು ಈ ಅಧಿವೇಶನಕ್ಕೆ ಬರುವುದಿಲ್ಲ ಎಂದು ಬರವಣಿಗೆ ಮುಖಾಂತರ ನನಗೆ ತಿಳಿಸಿಲ್ಲ, ನಂಜೇಗೌಡರ ಜೊತೆಗೆ ಅವರ ಇತರ ಸ್ನೇಹಿತರು ನನಗೆ ನೋಟೀಸ್ ಕೊಟ್ಟಿದ್ದಾರೆ. ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ ಈ ಚರ್ಚೆಗೆ ಪ್ರತ್ಯೇಕವಾದ ಸಮಯವನ್ನು ನಿಗಧಿ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನದೇನೂ ಇದರಲ್ಲಿ ಹೆಚ್ಚಿಗೆ ಇಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಏನು ಹೇಳಿದ್ದಾರೆಂದರೆ ಎರಡು ಸಾವಿರ ಇಸವಿಯೊಳಗಾಗಿ ನಾನು ಕೃಷ್ಣಾ ಬೇಸಿನ್‌ನಲ್ಲಿರತಕ್ಕಂಥ ಎಲ್ಲಾ ಪ್ರಾಜೆಕ್ಟ್‌ಗಳನ್ನು ಮುಗಿಸುತ್ತೇನೆ. ಅದರಲ್ಲಿ ವಿಶೇಷವಾಗಿ ಯು.ಕೆ.ಪಿ.ಗೆ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡುತ್ತೇವೆ ಎನ್ನತಕ್ಕಂಥ ವಾಗ್ದಾನವನ್ನು ಅವರು ಮಾಡಿದ್ದರು. ಆ ರೀತಿ ವಾಗ್ದಾನವನ್ನು ಮಾಡಿದ ಮೇಲೆ, ಇವೊತ್ತು ಪನುಃ ಗುಲ್ಬರ್ಗಾ ಭೀಮರಾಯನಗುಡಿಗೆ ಹೋದಾಗ ಏನು ಹೇಳಿದ್ದಾರೆಂದರೆ, ಈ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ನಾನು ಮಾರ್ಚ್‌ತಿಂಗಳ ಕೊನೆಯೊಳಗೆ ಕೇವಲ ಆರುನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇನೆ, ಜೂನ್ ತಿಂಗಳ ಕೊನೆಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿನೋಡಿದಾಗ, ಅವರು ಎಷ್ಟು ಖರ್ಚು ಮಾಡಿದ್ದಾರೆ ಎಂದು ಹೇಳಿ ನೋಡಿದಾಗ ಈ ಆರುನೂರು ಕೋಟಿ ಹೋಗಿ ಇವೊತ್ತು ಅವರು ಇಲ್ಲಿಯವರೆಗೆ

ಮುನ್ನೂರು ಕೋಟಿ ರೂಪಾಯಿ ಮಾತ್ರ ಇಲ್ಲಿಯವರೆಗೆ ಖರ್ಚು ಮಾಡಿದ್ದಾರೆ. ಅಂದರೆ ಇನ್ನು ಒಂದು ತಿಂಗಳಿನಲ್ಲಿ ಈ ಮುನ್ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು. ಮತ್ತು ಜೂನನಲ್ಲಿ ನಾಲ್ಕುನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಅವರು ಹೇಳಿದ್ದರು...

ಅಧ್ಯಕ್ಷರು : ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ, ಈಗ ಬಜೆಟ್ ಬೇರೆ ನಾವು ಫ್ರಿಪೋನ್ ಮಾಡಿಕೊಂಡಿರುವುದರಿಂದ ಸನ್ಮಾನ್ಯ ಹಣಕಾಸಿನ ಸಚಿವರು 4ನೇ ತಾರೀಖಿನಂದು ಬಜೆಟ್ ಮಂಡನೆ ಮಾಡುವಂಥ ಗದ್ದಲದಲ್ಲಿದ್ದಾರೆ. ಮುಖ್ಯಮಂತ್ರಿಗಳು ಹಾಜರಿ ಇದ್ದು ಈ ವಿಚಾರದಲ್ಲಿ ತಮ್ಮ ಮಾತನ್ನು ಕೇಳಿದರೆ ಅವರು ಉತ್ತರವನ್ನು ಕೊಡಬೇಕಾದಂಥವರು. ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ ತಾವು ಮತ್ತು ಇತರೇ ಎಲ್ಲಾ ಸದಸ್ಯರು ಕೂಡ ಈ ವಿಷಯದ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಆಸಕ್ತಿ ವಹಿಸಿರುವುದರಿಂದ ನಾನು ಮುಖ್ಯಮಂತ್ರಿಗಳ ಜೊತೆಯಲ್ಲೂ ಮಾತನಾಡಿ ಹಾಗೂ ತಮ್ಮ ಜೊತೆಯಲ್ಲಿ ಮಾತನಾಡಿ ಇದಕ್ಕೆ ಒಂದು ಸಮಯವನ್ನು ನಿಗಧಿ ಮಾಡುತ್ತೇನೆ, ಇದನ್ನು ವಿಶೇಷವಾದ ಚರ್ಚೆಗೆ ತೆಗೆದು ಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ಆದರೆ ಪದೇ ಪದೇ ಈ ರೀತಿ ಅವರು ಸುಳ್ಳು ಹೇಳಿ....

ಅಧ್ಯಕ್ಷರು : ಅದನ್ನೆಲ್ಲಾ ಮುಖ್ಯಮಂತ್ರಿಗಳಿರುವಂಥ ಸಮಯದಲ್ಲಿ ಹೇಳಿಬಿಡಿ. ನಾನು ಅವರನ್ನು ಕರಯಿಸುತ್ತೇನೆ, ಕರೆಯಿಸಿದಾಗ ನೀವು ಏನೇನು ಹೇಳಬೇಕು ಅದನ್ನೆಲ್ಲ ಅವರಿಗೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಸಮಯ ಎಲ್ಲಿದೆ ಹೇಳಿ.4ನೇ ತಾರೀಖು ಬಜೆಟ್ ಇದೆ. 4,5,6 ಈ ಮೂರು ದಿನ ಅದಕ್ಕಾಗಿಯೇ ಹೋಗುತ್ತದೆ. ಈ ರಾಜ್ಯಪಾಲರ ಭಾಷಣದಲ್ಲೂ ಕೂಡ ಅವರು ಕೇಳುವಷ್ಟು ಪುರುಸೊತ್ತಿಲ್ಲ, ಬೇರೆ ಬೇರೆ ವಿಷಯಗಳು ಬರುತ್ತಾ ಇವೆ. ಯು.ಕೆ.ಪಿ. ಬಗ್ಗೆ ಆಸಕ್ತಿವಹಿಸಿ ರಿವ್ಯೂ ಮಾಡಿ ಕೆಲಸ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥದ್ದನ್ನು ಅವು ಹೇಳುತ್ತಾ ಇಲ್ಲ. ಬಹುಶಃ ಇದರಿಂದ ಏನಾಗುತ್ತದೆಯೆಂದರೆ ಅವು ಕೊಟ್ಟಂಥ ಮಾತನ್ನು ಉಳಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ತಮಗೂ ಕೂಡ ಗೊತ್ತಿದೆ. ಸಾವಿರಾರೂ ರೂಪಾಯಿಗಳನ್ನು ಇದಕ್ಕೆ ಮಾಡದಿದ್ದರೆ ನಾವು ಒಂದು ಕ್ಷಣವೂ ಇರುವುದಿಲ್ಲವೆಂಬ ಮಾತನ್ನು ಒಂದತ್ತು ಸಾರಿ ಹೇಳಿರಬಹುದು. ಆದರೆ ಈಗ ಪರಿಸ್ಥಿತಿ ನೋಡಿದಾಗ ಇವರು ಒಂದು ಸಾರಿ ಮೇ ಎನ್ನುತ್ತಾರೆ, ಒಂದು ಸಾರಿ ಜೂನ್ ಎನ್ನುತ್ತಾರೆ, ಮತ್ತೊಂದು ಸಾರಿ ಜುಲೈ ಎನ್ನುತ್ತಾರೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಎತ್ತಿರುವಂತಹ ವಿಚಾರ ಬಹಳ ಪ್ರಾಮುಖ್ಯವಾದಂತಹ ವಿಚಾರವಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಈ

ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂತಹ ಕಾಮಗಾರಿಗಳಲ್ಲಿ ಅವರ ಮನಸ್ಸಿನಲ್ಲಿರುವಂತಹ ಕಳಕಳಿಯನ್ನು ನಾವು ಮೆಚ್ಚಬೇಕೆಂಬ ವಿಚಾರದಲ್ಲಿ ತಾವು ಹೇಳುತ್ತಿರುವಂತಹ ಇನ್ನೂ ಮುನ್ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು, ಅದನ್ನು ಹೇಗೆ ಖರ್ಚು ಮಾಡಲು ಸಾಧ್ಯವೆಂಬ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ. ಮಾನ್ಯ ಸಭಾಧ್ಯಕ್ಷರ ಜೊತಗೂ ಚರ್ಚೆ ಮಾಡಿ ಒಂದು ಸಮಯ ನಿಗದಿ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಸಮಯವನ್ನು ನಿಗದಿ ಮಾಡಿ, ಆದರೆ ಇದನ್ನು ಮುಂದೂಡಬಾರದು.

ಅಧ್ಯಕ್ಷರು : ನಾಳೆ ಸಂಜೆಯ ಒಳಗೆ ಮಾಡಿಸಿಕೊಡುತ್ತೇನೆ.

SRI M.C. NANAIAH : We want to discuss this issue. We will agree for a discussion.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೃಷ್ಣ ಯೋಜನೆಯ ಬಗ್ಗೆ ಏನು ನಿಲುವಳಿ ಸೂಚನೆಯನ್ನು ತರುತ್ತಿದ್ದಾರೆ. ಅದಕ್ಕೆ ನಮ್ಮ ಸಂಪೂರ್ಣವಾದ ಬೆಂಬಲವಿದೆ. ಇದು ಸಮಗ್ರವಾಗಿ ಚರ್ಚೆಯಾಗಬೇಕು ಮತ್ತು ಚರ್ಚೆಯ ಫಲಶ್ರುತಿಯು ಅತ್ಯಂತ ಪ್ರಮುಖವಾದುದ್ದು, ಸುಮ್ಮನೆ ತಾವು ಪ್ರತಿ ವಿಧಾನಸಭೆಯಲ್ಲಿಯೂ ಭರವಸೆಯನ್ನು ಕೊಡುತ್ತಿದ್ದೀರಿ. ಹಾಗೆ ಹೊರಗಡೆಯೂ ಭಾಷಣವನ್ನು ಭರವಸೆಯನ್ನು ಕೊಡುತ್ತಿದ್ದೀರಿ. ಈ ಭರವಸೆಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಆ ಭರವಸೆಗಳಿಂದ ಅಲ್ಲಿ ಸಮಗ್ರವಾಗಿ ಕೆಲಸ ನಿಂತಿದೆ. ಇವರು ಮುಂದೆ ಪಾರ್ಲಿಮೆಂಟ್ ಚುನಾವಣೆಗೆ ಹೋಗುತ್ತಾರೆ. ಆಗ ಕೃಷ್ಣಯೋಜನೆ ಮೂಲೆಗೆ ಹಾಕಿ ಚುನಾವಣೆ ಒಂದೇ ದೃಷ್ಟಿಯಾಗುತ್ತದೆ. ಆ ದೃಷ್ಟಿಯಿಂದ ಸರ್ಕಾರದ ನಿಲುವು ಏನು ಎಂಬುದನ್ನು ತಿಳಿಸಬೇಕು.

(ಶ್ರೀ ಎಂ. ಎಸ್. ಪಾಟೀಲ್ (ಉಪಾಧ್ಯಕ್ಷರು) ಅಧ್ಯಕ್ಷ ಪೀಠವನ್ನುಂಕರಿಸಿದರು).

ಕೃಷ್ಣ ಯೋಜನೆಯ ಬಗ್ಗೆ ಸಮಗ್ರವಾದಂತಹ ಚರ್ಚೆಯಾಗಬೇಕು. ಮತ್ತು 6 ಟಿ.ಎಂ.ಸಿ. ನೀರನ್ನು ಈ ಸದನವು ಮಾಡಿದಂತಹ ನಿರ್ಣಯದ ವಿರುದ್ಧವಾಗಿ.....

ಶ್ರೀ ಎಂ. ಸಿ. ನಾಣಯ್ಯ : ಇದಕ್ಕೆ ಎಲ್ಲರೂ ಒಪ್ಪಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ನಾನು ಒಪ್ಪಿಲ್ಲ. ಬಿಜೆಪಿಯವರು ಮತ್ತು ಕಾಂಗ್ರೆಸ್ ಪಕ್ಷದವರು ಒಪ್ಪಿದ್ದಾರೆ.

ಉಪಾಧ್ಯಕ್ಷರು : ತಮಗೆ ಚರ್ಚೆಗೆ ಅವಕಾಶವನ್ನು ಕೊಟ್ಟಾಗ ತಾವು ಎಲ್ಲವನ್ನು ಮೆನ್‌ಷನ್ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಕಾವೇರಿ ವಿಚಾರವಾಗಿ ಚರ್ಚೆಗೆ ಬರಬೇಕಾಗುತ್ತದೆ. ಈ

ಸದನದ ನಿರ್ಣಯಕ್ಕೆ ವಿರುದ್ಧವಾಗಿ ಹೊರಗಡೆ ಸದನವನ್ನು ಕಡೆಗಾಣಿಸಿ 6 ಟಿ.ಎಂ.ಸಿ ನೀರನ್ನು ಮಾನ್ಯ ಪ್ರಧಾನಮಂತ್ರಿಯವರ ಮಾತಿಗೆ ಒಗೊಟ್ಟು ಇವರು ನೀರನ್ನು ಕೊಟ್ಟಿರುವಂಥಾದ್ದು ಇದು ಸಮಗ್ರವಾಗಿ ಚರ್ಚೆಯಾಗಬೇಕು.

ಉಪಾಧ್ಯಕ್ಷರು : ಅವರು ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳುತ್ತಾರಲ್ಲಾ.

ಶ್ರೀ ಎಂ. ಸಿ. ನಾಣಯ್ಯ : ಇದನ್ನು ಚರ್ಚೆ ಮಾಡೋಣ. ಅವರು ಹೇಳುತ್ತಿರುವಂಥಾದ್ದು ಸಭೆಯ ನಿರ್ಣಯಕ್ಕೆ ವಿರುದ್ಧವಾಗಿ ಎಂದು ಹೇಳಿದ್ದಾರೆ. ಮಾನ್ಯ ಉಪಾಧ್ಯಾಕ್ಷರೇ, ತಮಗೆ ಗೊತ್ತಿದೆ. ಎಲ್ಲಾ ವಿರೋಧಪಕ್ಷದ ನಾಯಕರ ಜೊತೆಗೆಯಲ್ಲಿ ಚರ್ಚೆ ಮಾಡಿ ಮಾನ್ಯ ವಾಟಳ್ ನಾಗರಾಜರವರು ಒಬ್ಬರು ಇಲ್ಲ, ಉಳಿದ ಪಕ್ಷದೊಡನೆ ರಾಜ್ಯದ ಹಿತದೃಷ್ಟಿಯಿಂದ ಯಾವ ರೀತಿಯ ಕಾರ್ಯಕ್ರಮವನ್ನು ಹಾಕಬೇಕೆಂದು ವಿಷಯವನ್ನು ತೀರ್ಮಾನ ಮಾಡಿ ಆ ಒಂದು ಸಂದರ್ಭದಲ್ಲಿ ಟ್ರಿಬ್ಯೂನಲ್ ಆಜ್ಞೆಯ ಅನುಗುಣವಾಗಿ ಮಾಡಿದ್ದು ಅಲ್ಲ. ಅದನ್ನು ಕೂಡ ಸಮಗ್ರವಾಗಿ ಚರ್ಚೆ ಮಾಡಿ ಎಲ್ಲರ ಒಪ್ಪಿಗೆಯ ನಂತರವೇ ಮಾಡಿದಂತಹ ಸಂದರ್ಭದಲ್ಲಿ ಈ ಸದನದಲ್ಲಿ ಮಾನ್ಯ ವಾಟಾಳ್ ನಾಗರಾಜರವರು ಮತ್ತು ಅವರ ಮಿತ್ರರು ಚರ್ಚೆ ಮಾಡಬೇಕೆಂದು ಬಯಸಿದರೆ ಅವರು ಅದನ್ನು ರಾಜ್ಯಪಾಲರ ಭಾಷಣದಲ್ಲಿ ವ್ಯಾಖ್ಯಾನ ಮಾಡಬಹುದು. ಆದರೆ ಅದನ್ನೇ ಪ್ರತ್ಯೇಕವಾದ ಚರ್ಚೆ ಮಾಡಲು ಇವತ್ತಿಗೆ ಅವಶ್ಯಕತೆ ಇದೆ ಎಂಬ ಪ್ರಶ್ನೆ ಕೂಡ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅದು ಬಹಳ ಪ್ರಮುಖವಾಗಿ ಚರ್ಚೆಯಾಗಬೇಕು.

ಉಪಾಧ್ಯಕ್ಷರು : ಅವರು ಬೇರೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಕುರಿತು.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ನಮ್ಮ ಕರ್ನಾಟಕ ರಾಜ್ಯದ ಹೆಮ್ಮೆಯ ಸಂಕೇತವಾದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದಿರುವಂತಹ ಒಂದೆರಡು ಗಂಭೀರವಾದಂತಹ ವಿಷಯವನ್ನು ಸರ್ಕಾರದ ಗಮನಕ್ಕೆ ತರಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತಿದ್ದೇನೆ. ಅಲ್ಲಿ ಉಪಕುಲಪತಿಗಳು ಶ್ರೀ ಮಾದಯ್ಯ ಎಂದು ಇದ್ದಾರೆ. ಬಹುಶಃ ಮೈಸೂರು ವಿಶ್ವವಿದ್ಯಾನಿಲಯದ ಯಾರೂ ಕಂಡು ಕೇಳರಿಯದ ಉಪಕುಲಪತಿ ಆ ಮನುಷ್ಯ, ಆತನ ದರ್ಬಾರ್‌ನಲ್ಲಿ ಈ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಚಿಂತನೆಗೆ ಅವಕಾಶವಿಲ್ಲ. ಒಂದು ಕಾಲದಲ್ಲಿ ಈ ವಿಶ್ವವಿದ್ಯಾನಿಲಯ ಇಡೀ ರಾಷ್ಟ್ರಕ್ಕೆ ಮಾದರಿಯಾಗಿದ್ದಂಥಾದ್ದು, ಈಗ ಶ್ರೀಮಾದಯ್ಯನವರ ನಾಯಕತ್ವದಲ್ಲಿ ಇಡೀ ವಿಶ್ವವಿದ್ಯಾನಿಲಯವನ್ನು ಅಲ್ಲಿನ ಚಿಂತನೆಯ ವಿಷಯವನ್ನು ಸಂಪೂರ್ಣವಾಗಿ ಕೆಡವಿ ಬಿಟ್ಟಿದ್ದಾರೆ. ಅದಕ್ಕೆ ನಾನು ಒಂದೆರಡು ಉದಾಹರಣೆಯನ್ನು ನಿಮಗೆ ಹೇಳುತ್ತೇನೆ. ದಿ: 14-5-95 ರಂದು ಒಂದು ಅಂತರ್ಜಾತಿ ವಿವಾಹವನ್ನು ಮಾಡಲೂ